**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 03-01-2022.**

**ಪಾಟೀ ಸವಾಲು ಪ್ರತಿವಾದಿ ನಂ.13 ರವರ ಪರ ವಕೀಲರಿಂದ :**

**1)** ನನ್ನ ತಾಯಿಗೆ ಮದುವೆ ಆಗಿ ಸುಮಾರು 65 ವರ್ಷ ಕಳೆದಿದೆ. ನಮ್ಮ ತಾಯಿ ಮದುವೆ ಆದಾಗಿನಿಂದ ಬುಳ್ಳಹಳ್ಳಿಯಲ್ಲಿ ವಾಸವಾಗಿದ್ದಾರೆ. ಕನ್ನಮಂಗಲಕ್ಕೂ ಮತ್ತು ಬುಳ್ಳಹಳ್ಳಿಗೂ ಸುಮಾರು 12 ಕಿ.ಮೀ. ಅಂತರವಿರುತ್ತದೆ. ದಾವೆ ಹಾಕುವಾಗ ಮಾಹಿತಿಯನ್ನು ವಕೀಲರಿಗೆ ನಮ್ಮ ತಾಯಿ ನೀಡಿರುತ್ತಾಳೆ. ನಮ್ಮ ತಾಯಿಗೆ ದಾವಾ ಆಸ್ತಿಯಲ್ಲಿ ಏನು ನಡೆಯುತ್ತಿತ್ತು ಎಂಬ ಬಗ್ಗೆ ಮಾಹಿತಿ ಇತ್ತು. ನಮ್ಮ ತಾಯಿಗೆ ಹುಷಾರಿಲ್ಲ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯ ಬಗ್ಗೆ ನನ್ನ ತಾಯಿ ನನಗೆ ಮುಕ್ತಿಯಾರ್ ಪತ್ರ ನೀಡಿದ ನಂತರ ನನಗೆ ಗೊತ್ತಾಯಿತು.

**2)** ಆಂಜಿನಪ್ಪನ ತಂದೆಯ ಹೆಸರು ಭೈರಪ್ಪ ಎಂದರೆ ಸರಿ. ಭೈರಪ್ಪನಿಗೆ ಇಬ್ಬರು ಮಕ್ಕಳು. ಆಂಜಿನಪ್ಪ ಮತ್ತು ಭೈರೇಗೌಡ. ಭೈರಪ್ಪನಿಗೆ ನಂಜಮರಿ ಎಂಬ ಇನ್ನೊಬ್ಬ ಮಗನಿದ್ದಾನೆ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರ ಹೆಂಡತಿ ಮತ್ತು ಮಕ್ಕಳನ್ನು ಮಾಡಿದ್ದೇವೆ. ಸದರಿ ಭೈರಪ್ಪ, ಆಂಜಿನಪ್ಪ ಮತ್ತು ಭೈರೇಗೌಡ ಕನ್ನಮಂಗಲದಲ್ಲಿ ಒಟ್ಟಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಭೈರಪ್ಪನಿಗೆ ಪಿತ್ರಾರ್ಜಿತವಾಗಿ ಕೆಲವು ಆಸ್ತಿಗಳು ಬಂದಿದ್ದವು ಎಂದರೆ ಸರಿ. ಸದರಿ ಭೈರಪ್ಪನ 2 ನೇ ಮಗ ಭೈರೇಗೌಡ ತೀರಿಕೊಂಡರು ಎಂದರೆ ಸರಿ. 1 ನೇ ಮಗ ಆಂಜಿನಪ್ಪ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಒಟ್ಟು ಕುಟುಂಬದಲ್ಲಿ ಇದ್ದಾಗ ಅವರು ತೀರಿಕೊಂಡರು ಎಂದರೆ ಸರಿ.

**3)** ನಿ.ಪಿ.44 ರ ಪ್ರಕಾರ 4 ನೇ ದಾವಾ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿ ಉಳುಮೆ ಮಾಡುತ್ತಿದ್ದೇವೆ ಎಂದು ಹೇಳಿ ಒಟ್ಟು ಕುಟುಂಬದ ಪರವಾಗಿ ಮಂಜೂರಾತಿ ಕೋರಿ ಅರ್ಜಿ ನೀಡಿದ್ದರು ಎಂದರೆ ಸರಿ. 4 ನೇ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 2 ಎಕರೆ 3 ಗುಂಟೆ ಎಂದರೆ ಸರಿ. ಅದರಲ್ಲಿ ಅರ್ಧ ಭಾಗ ಅಂದರೆ 1 ಎಕರೆ 1 ½ ಗುಂಟೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ.

**4)** ನಿ.ಪಿ.46 ರ ಪ್ರಕಾರ ಮಂಜೂರಾತಿ ಪ್ರಕರಣದಲ್ಲಿ ಕೇವಲ ಶಂಬಣ್ಣ ತಂದೆ ಮುನಿಶಾಮಪ್ಪ ರವರ ಮೇಲೆ ಮಾತ್ರ ಪ್ರಕರಣ ನಡೆದಿತ್ತು ಎಂದರೆ ಸರಿ. ಆ ಪ್ರಕರಣದಲ್ಲಿ ಆಂಜಿನಪ್ಪನಿಗೆ 1 ಎಕರೆ 1 ½ ಗುಂಟೆ ಮಂಜೂರಾತಿ ಆಗಿರುತ್ತದೆ ಎಂದರೆ ಸರಿ. ಸದರಿ ಮಂಜೂರಾದ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ - ಪದ್ಮಮ್ಮನ ಜಮೀನು, ಪಶ್ಚಿಮಕ್ಕೆ - ಮುನಿಶಾಮಪ್ಪನ ಜಮೀನು, ಉತ್ತರಕ್ಕೆ - ಗೋವಿಂದಪ್ಪನ ಜಮೀನು ಮತ್ತು ದಕ್ಷಿಣಕ್ಕೆ - ಇ. ವೆಂಕಟಶಾಮಪ್ಪನ ಜಮೀನು ಎಂದರೆ ಸರಿ.

**5)** ನಿ.ಪಿ.16 - ವಿಭಾಗ ಪತ್ರದಲ್ಲಿಯೂ ಸಹ ಸದರಿ ಮಂಜೂರಾತಿ ಆದ ಆಸ್ತಿಯ ದಕ್ಷಿಣಕ್ಕೆ - ಇ. ವೆಂಕಟಶಾಮಪ್ಪನ ಆಸ್ತಿ ಕಾಣಿಸಿದ್ದಾರೆ ಎಂದರೆ ಸರಿ. ಅದರಲ್ಲಿಯೂ ಉತ್ತರಕ್ಕೆ - ಗೋವಿಂದಪ್ಪನ ಜಮೀನು ಎಂದು ಕಾಣಿಸಿದ್ದಾರೆ ಎಂದರೆ ಸರಿ.

**6)** ನಿ.ಪಿ.17 – ಕ್ರಯಪತ್ರದಲ್ಲಿಯೂ ಸಹ ಸರ್ವೆ ನಂ. 91/4 ರಲ್ಲಿ 1 ಎಕರೆ 1 ½ ಗುಂಟೆಗೆ ಸಂಬಂಧಪಟ್ಟಂತೆ ಚೆಕ್ಕುಬಂದಿಯನ್ನು ಪೂರ್ವಕ್ಕೆ - ಪದ್ಮಮ್ಮನ ಜಮೀನು, ಪಶ್ಚಿಮಕ್ಕೆ - ಮುನಿಶಾಮಪ್ಪನ ಜಮೀನು, ಉತ್ತರಕ್ಕೆ - ಉಳಿಕೆ ಜಮೀನು ಅಂದರೆ 1 ಎಕರೆ 1 ½ ಗುಂಟೆ ಮತ್ತು ದಕ್ಷಿಣಕ್ಕೆ - ಕೃಷ್ಣಪ್ಪನವರ ಆಸ್ತಿ ಕಾಣಿಸಿದ್ದಾರೆ ಎಂದರೆ ಸರಿ. ಈಗ ತೋರಿಸುತ್ತಿರುವ ನಿ.ಪಿ.47 ರ ಕೆಳಗಡೆ ಭಾಗವನ್ನು 13 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ನಕ್ಷೆಯಲ್ಲಿ ಕೆಳಗಡೆ ಕಾಣಿಸಿರುವ ಆಸ್ತಿಯನ್ನು ಇ. ವೆಂಕಟಶಾಮಪ್ಪ ರವರಿಂದ 13 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ನಮ್ಮ ದಾವೆಯ ಷೆಡ್ಯೂಲ್ ನಲ್ಲಿಯೂ ಸಹ 4 ನೇ ದಾವಾ ಆಸ್ತಿಗೆ ದಕ್ಷಿಣಕ್ಕೆ - ಇ. ವೆಂಕಟಶಾಮಪ್ಪನವರ ಚೆಕ್ಕುಬಂದಿ ಕಾಣಿಸಿದ್ದೇವೆ ಎಂದರೆ ಸರಿ. ನಿ.ಪಿ.47 ರ 1=02 ಎಂದು ಕಾಣಿಸಿರುವ ಭಾಗ ಆಂಜಿನಪ್ಪನಿಗೆ ಮಂಜೂರಾತಿ ಆದ ಆಸ್ತಿ ಮತ್ತು 1.01 ಎಂದು ಕಾಣಿಸಿರುವ ಕೆಳಗಡೆ ಆಸ್ತಿ ಇ. ವೆಂಕಟಶಾಮಪ್ಪನವರಿಗೆ ಸೇರಿದ ಆಸ್ತಿ ಎಂದರೆ ಸರಿ. ನಮ್ಮ ತಾತ ಆಂಜಿನಪ್ಪನಿಗೆ ಮಂಜೂರಾತಿ ಆದ ಆಸ್ತ ಬೇರೆ ಮತ್ತು ಇ. ವೆಂಕಟಶಾಮಪ್ಪನಿಂದ 13 ನೇ ಪ್ರತಿವಾದಿ ಕ್ರಯಕ್ಕೆ ಹಿಡಿದ ಆಸ್ತಿ ಬೇರೆ ಎಂದರೆ ಸರಿ.

**7)** ನಿ.ಪಿ.24ರ ಬಗ್ಗೆ ನನಗೆ ಮಾಹಿತಿ ಇದೆ. ನಿ.ಪಿ.24 ರ ಪ್ರಕಾರ 13 ನೇ ಪ್ರತಿವಾದಿ ಒಟ್ಟು 23 ಎಕರೆ 35 ಗುಂಟೆ .41 ವಿಸ್ತೀರ್ಣವನ್ನು ಭೂ ಪರಿವರ್ತನೆಗೊಳಿಸಿ ಲೇಔಟ್ ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ನಿ.ಪಿ.24ರ ಪ್ರಕಾರ 9,731.426 Sq.mtrs. ಆಸ್ತಿಯನ್ನು ಸರ್ಕಾರಕ್ಕೆ ಪಾರ್ಕಿಗಾಗಿ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಅದೇ ರೀತಿ ಸಿವಿಕ್ ಆಮೇನಿಟಿಸ್ಸ್ ಗಾಗಿ ಒಟ್ಟು 5,162.672 Sq.mtrs. ಆಸ್ತಿಯನ್ನು ಹಾಗೂ ರೋಡಿಗಾಗಿ 29,861.384 Sq.mtrs. ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ದಿನಾಂಕ: 25-02-2012ರಲ್ಲಿ ಪಡೆದಿದ್ದೇನೆ ಎಂದರೆ ಸರಿ. ಸದರಿ ವಿಸ್ತೀರ್ಣಕ್ಕೆ ಸರ್ಕಾರದವರು ಮಾಲೀಕರು ಆಗಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಪ್ರಯತ್ನಿಸಲಿಲ್ಲ. ಸಾಕ್ಷಿ ಕೊಡುವ ಮೊದಲು ದಾವಾ ಆಸ್ತಿಯನ್ನು ನೋಡಿ ಬಂದಿರುತ್ತೇನೆ. ವಿಮಾನ ನಿಲ್ದಾಣದ ಎದುರುಗಡೆ ಈ ಆಸ್ತಿ ಇರುತ್ತದೆ. ಸದರಿ ಒಟ್ಟು 23 ಎಕರೆ 35 ಗುಂಟೆ .41 ರ ವಿಸ್ತೀರ್ಣಕ್ಕೆ ಕಂಪೌಂಡ್ ಹಾಕಿದ್ದಾರೆ ಎಂದರೆ ಸರಿ. ಆ ಜಾಗದಲ್ಲಿ ಕಟ್ಟಡಗಳು ಬಂದಿವೆ ಎಂದರೆ ಆ ಜಾಗದಲ್ಲಿ ನಮ್ಮ ಆಸ್ತಿಗೆ ಕಟ್ಟಡಗಳು ಬಂದಿಲ್ಲ ಎಂದು ಹೇಳುತ್ತಾರೆ.

**8)** ನಿ.ಪಿ.9 – ಪಹಣಿ ಪತ್ರಿಕೆಯನ್ನು ದಿನಾಂಕ: 19-02-2008 ರಂದು ಪಡೆದಿರುತ್ತೇವೆ ಎಂದರೆ ಸರಿ. ನಾವು ಪಹಣಿ ಪತ್ರಿಕೆಯನ್ನು ಪಡೆದಾಗ ಸದರಿ ಆಸ್ತಿ ಭೂ ಪರಿವರ್ತನೆ ಆಗಿತ್ತು ಎಂದರೆ ಸರಿ. ನಿ.ಪಿ.10 ರ ಪಹಣಿ ಪತ್ರಿಕೆಯಲ್ಲಿಯೂ ಸಹ ಭೂ ಪರಿವರ್ತನೆ ಆದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಅದೇ ರೀತಿ ನಿ.ಪಿ.11ರ ಪ್ರಕಾರ ಸರ್ವೆ ನಂ.91/4 ಭೂ ಪರಿವರ್ತನೆ ಆಗಿದೆ ಎಂಬ ಮಾಹಿತಿ ಇದೆ ಎಂದರೆ ಸರಿ. ಈ ದಾವೆ ಹಾಕುವಾಗ ದಾವಾ ಆಸ್ತಿ 1 ರಿಂದ 4 ಭೂ ಪರಿವರ್ತನೆ ಆದ ಬಗ್ಗೆ ನಮ್ಮ ವಕೀಲರಿಗೆ ಹೇಳಿರಲಿಲ್ಲ. ಸದರಿ ದಾಖಲೆಯನ್ನು ನಮ್ಮ ವಕೀಲರಿಗೆ ನೀಡಿದ್ದೇವೆ. ವಕೀಲರಿಗೆ ಮಾಹಿತಿ ನೀಡುವಾಗ ನಮ್ಮ ತಾಯಿಯ ಜೊತೆ ನಾನು ಇರಲಿಲ್ಲ. ಈ ದಾವಾ ಆಸ್ತಿಯ ಬಗ್ಗೆ ನನಗೆ 2017ರಿಂದ ಮಾಹಿತಿ ಗೊತ್ತಾಯಿತು. ಈ ದಾವಾ ಆಸ್ತಿಯ ಬಗ್ಗೆ ನಮ್ಮ ತಾಯಿಗೆ ಮಾತ್ರ ಖುದ್ದಾಗಿ ಮಾಹಿತಿ ಇರುತ್ತದೆ. ನಮ್ಮ ತಾಯಿಗೆ ಎಲ್ಲಾ ಮಾಹಿತಿ ಇದ್ದು, ಅವರನ್ನು ಸಾಕ್ಷಿ ಹೇಳಲು ನಾನೇ ಬಿಡುತ್ತಿಲ್ಲ ಎಂದರೆ ಸರಿಯಲ್ಲ.

**9)** ನಿ.ಪಿ.12 ರ ಪ್ರಕಾರ 11 ನೇ ಪ್ರತಿವಾದಿಯ ಪರವಾಗಿ ಸರ್ವೆ ನಂ.91/1 ರಲ್ಲಿ 1 ಎಕರೆ 17 ½ ಗುಂಟೆಗೆ ಖಾತೆ ಆಗಿತ್ತು ಎಂದರೆ ಸರಿ. ಸದರಿ ನಿ.ಪಿ.12 ನ್ನು ಪ್ರಶ್ನಿಸಿ ನಾವು ಯಾವುದೇ ಪ್ರಕರಣವನ್ನು ಹೂಡಿಲ್ಲ. ಅದೇ ರೀತಿ ನಿ.ಪಿ.13 ರ ಪ್ರಕಾರ ಸರ್ವೆ ನಂ.91/2 ರಲ್ಲಿ 1 ಎಕರೆ 2 ಗುಂಟೆಗೆ 10 ನೇ ಪ್ರತಿವಾದಿಗೆ ಖಾತೆ ಆಗಿತ್ತು ಎಂದರೆ ಸರಿ. ಸದರಿ ಖಾತೆಯನ್ನು ನಾವು ಪ್ರಶ್ನಿಸಿಲ್ಲ. ಪ್ರತಿವಾದಿ ನಂ.10 ರಿಂದ 12 ರವರ ಕ್ರಯಪತ್ರಗಳು ನಮ್ಮ ತಾಯಿಗೆ ಯಾವಾಗ ಗೊತ್ತಾದವು ಎಂದು ಅವರಿಗೆ ಮಾತ್ರ ಗೊತ್ತು ಎಂದರೆ ಸರಿ.

**10)** ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**